ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೆ, ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ರಸ್ತೆಗಳ ಅಭಿವೃದ್ಧಿಪಡಿಸಲು ಶಾಸಕರ ವಿವೇಚನೆಗೆ ತಕ್ಕಂತೆ ಖರ್ಚು ಮಾಡಲು 20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ, ನಮ್ಮ ಕ್ಷೇತ್ರದಲ್ಲಿ ಪಿ ಡಬ್ಲೂ ಡಿ ಗೆ ಸೇರಿರತಕ್ಕಂಥ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣ ದರಗಳು ಹೆಚ್ಚಾಗಿರುವುದು ಮತ್ತು ಗುತ್ತಿದಗೆದಾರರು ಸರಿಯಾಗಿ ಕೆಲಸ ಮಾಡದೇ ಇರುವುದಾಗಿದೆ ಆದುದರಿಂದ ಇನ್ನು ಮುಂದಾರೂ ಶಾಸಕರ ವಿವೇಚನಾ ಮೇಲೆ ರಸ್ತೆ ಅಭಿವೃದ್ಧಿಪಡಿಸುವುದಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಬಿಡುಗಡೆ ಮಾಡಲಾಗುತ್ತದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಸಿ.ಎಂ.ಉದಾಸಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಖರ್ಗೆಯವರು ಹೇಳಿದಹಾಗೆ ನೀರಾವರಿ ಪ್ರದೇಶದಲ್ಲಿರತಕ್ಕಂಥ ಪ್ರದೇಶಗಳಲ್ಲಿ ಮತ್ತು ಬ್ಲಾಕ್ ಕಾಟನ್ ಸಾಯಿಲ್ ಇರತಕ್ಕಂಥ ಪ್ರದೇಶಗಳಲ್ಲಿ ಮಣ್ಣಿನ ಗುಣಮಟ್ಟದ ಆಧಾರದ ಮೇಲೆ ರಸ್ತೆ ಮಾಡುವ ರೇಟ್‌ನ್ನು ನಿಗಧಿ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಕೆಲವು ಕಡೆ ಪಕ್ಕದ ಭೂಮಿ ಮಟ್ಟಕ್ಕಿಂತ ರಸ್ತೆಗಳು ಕೆಳ ಮಟ್ಟದಲ್ಲಿದ್ದು ಪ್ರತಿ ವರ್ಷ ರಿಪೇರಿ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಹರಿಹರ-ಶಿವಮೊಗ್ಗ ರಸ್ತೆ ಕೂಡ ಇದೇ ರೀತಿಯಾಗಿದೆ. ಸನ್ಮಾನ್ಯ ಪುಟ್ಟಣಯ್ಯನವರ ಕ್ಷೇತ್ರಕ್ಕೆ ನಾನು ಹೋಗಿದ್ದಾಗಲೂ ರಸ್ತೆಗಳು ಕೆಟ್ಟಿರುವುದನ್ನು ನೋಡಿದ್ದೇನೆ. ರಸ್ತೆಗಳ ಪಕ್ಕದಲ್ಲಿ ಡ್ರೆನ್ ಮಾಡುವುದು ಮತ್ತು ಬೇರೆ ಬೇರೆ ಜಾಗದ ರಸ್ತೆಗಳಿಗೆ ಭಿನ್ನ ರೀತಿಯಲ್ಲಿ ಎಸ್ಟಿಮೇಟ್ ಮಾಡುವುದಕ್ಕೆ ಇಲಾಖೆಯವರು ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ಮತ್ತೆ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಇನ್ನು ಹೆಚ್ಚಿನ ಹಣವನ್ನು ಕೊಡುತ್ತೀರಾ ಎಂದು ಕೇಳಿದ್ದಾರೆ ಆನುದಾನ ಪರಿಸ್ಥಿತಿಯನ್ನು ನೋಡಿಕೊಂಡು ಅದರ ಬಗ್ಗೆ ಮುಂದೆ ಹೇಳುತ್ತೇನೆ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):- ಮಾನ್ಯ ಅಧ್ಯಕ್ಷರೆ, 2 ನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 46 ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ:- ಉಡುಪಿಯ ಪ್ರಧಾನ ಮುನ್ಸೀಫರ ಹುದ್ದೆಯ ಭರ್ತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:- 25 (354)

ಶ್ರೀ ಯು. ಆರ್ ಸಭಾಪತಿ (ಉಡುಪಿ)

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಉಡುಪಿಯ ಪ್ರಧಾನ ಮುನ್ಸೀಫರ್ ಹುದ್ದೆಯು ಎಷ್ಟು ವರ್ಷಗಳಿಂದ ಖಾಲಿ ಇದೆ:- ದಿನಾಂಕ 27.5.1996 ರಿಂದ ಖಾಲಿ ಇದೆ.

ಆ) ಪ್ರಧಾನ ಮುನ್ಸೀಫರ್ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?:- ದಿನಾಂಕ 7.5.1996 ರ ಸಂಖ್ಯೆ: ಜಿಒಬಿ(1):4(3) 96ರ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಲ್ಲಿ ಉಡುಪಿಯ ಹೆಚ್ಚುವರಿ ಮುನ್ಸೀಫ್ ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಧೀಶರನ್ನು ಉಡುಪಿಯ ಪ್ರಧಾನ ಮುನ್ಸೀಫರ ಹುದ್ದೆಗೆ ಸಮವರ್ತಿ

ನೇಮಕಾತಿಯನ್ನು ಮಾಡಲಾಗಿದೆ.

ಶ್ರೀ ಎಂ.ಸಿ.ನಾಣಯ್ಯ
(ಕಾನೂನು ಮತ್ತು ವಾರ್ತಾ ಸಚಿವರು)

ವಿಷಯ:- ಪಾನ ನಿಷೇಧವನ್ನು ಜಾರಿಗೊಳಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:- 29 (185)

ಡಾ॥ ಒ.ಪಿ.ಕರ್ಕಿ (ಕುಮಟಾ)

ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಪಾನ ನಿಷೇಧದ ಬಗ್ಗೆ ಘೋಷಿಸಲ್ಪಟ್ಟಿರುವ ಸರ್ಕಾರದ ನೀತಿಯನ್ನು ಯಾವ ದಿನಾಂಕದಿಂದ ಜಾರಿಗೊಳಿಸಲಾಗುವುದು?:- ರಾಜ್ಯದಲ್ಲಿ ಪಾನ ನಿಷೇಧವನ್ನು ಪುನಃ ಜಾರಿಗೆ ತರುವುದರಿಂದ ಉಂಟಾಗುವ ಸಾಧಕ ಬಾಧಕಗಳನ್ನು ಪರಿಶೀಲಿಸಲು ಸಚಿವ ಸಂಪುಟದ ಒಂದು ಉಪಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯ ತನ್ನ ವರದಿಯನ್ನು ನೀಡಬೇಕಾಗಿದೆ. ಆ ಸಮಿತಿಯು ಮಾಡುವ ಶಿಫಾರಸ್ಸುಗಳನ್ನು ಆಧರಿಸಿ ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು.

ಆ) ಅನಧಿಕೃತ ಮಾರಾಟಗಾರರನ್ನು ನಿಯಂತಿಸಲು ಮತ್ತು ಅವರ ಬೆಳವಣಿಗೆಯನ್ನು ತಡೆಹಿಡಿಯಲು ಅಬಕಾರಿ ನಿರೀಕ್ಷಕರು ಕಛೇರಿಗೆ ಜೀಪು ದೂರವಾಣಿ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗಿದೆಯೇ ?:- ಇಲ್ಲ.

ಇ) ಇಲ್ಲದಿದ್ದಲ್ಲಿ ಕಾರಣಗಳನ್ನು ತಿಳಿಸಿ?:- ರಾಜ್ಯದಲ್ಲಿ 60 ಅಬಕಾರಿ ನಿರೀಕ್ಷಕರುಗಳ ಕಛೇರಿಗೆ 60 ಮೋಟಾರು ಸೈಕಲ್‌ಗಳನ್ನು ಒದಗಿಸಲಾಗಿದೆ ಇದಲ್ಲದೆ ಜಿಲ್ಲೆಗಳಲ್ಲಿ ಅಬಕಾರಿ ಉಪ ವಿಭಾಗ ದಳಗಳಿಗೆ ವಾಹನಗಳನ್ನು ಮತ್ತು ದೂರವಾಣಿ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ. ಅಬಕಾರಿ ನಿರೀಕ್ಷಕರುಗಳು ಸಂಬಂಧಿಸಿದ ಅಬಕಾರಿ ಉಪಾ ವಿಭಾಗಾಧಿಕಾರಿಗಳ ಮತ್ತು ಅಬಕಾರಿ ವಿಚಕ್ಷಣ ದಳಗಳ ಸಹಯೋಗದೊಡನೆ ಅನಧಿಕೃತ ಮಾರಾಟಗಾರರನ್ನು ತಡೆಗಟ್ಟಲು ಕ್ರಮ ಕೈಗೊಳ್ಳುತ್ತಾರೆ.

ವಿಷಯ:- ಲೋಕೋಪಯೋಗಿ ಇಲಾಖೆಯ ವತಿಯಿಂದ ಕುಮಟಾ ವಿಧಾನ ಸಭಾಕ್ಷೇತ್ರದಲ್ಲಿನ ರಸ್ತೆ ಕಾಮಗಾರಿಗಳ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:- 30 (189)

ಶ್ರೀ ಡಾ॥ ಎಂ.ಪಿ.ಕರ್ಕಿ (ಕುಮಟಾ)

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಲೋಕೋಪಯೋಗಿ ಇಲಾಖೆಯಿಂದ ವಹಿಸಿ ಕೊಂಡಿರುವ 20 ಕಿ.ಮೀ ದೂರದ ರಸ್ತೆಗಳನ್ನು ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿನ ಶಾಸಕರುಗಳಿಗೆ ಸರ್ಕಾರವು ವಹಿಸಿ ಕೊಟ್ಟಿರುವುದು ನಿಜವೆ:- ಸರ್ಕಾರದಲ್ಲಿ ಈ ಬಗ್ಗೆ ಯೋಜನೆ ಇಲ್ಲ. ಆದರೂ ಮಾನ್ಯ ಮಾಜಿ ಲೋಕೋಪಯೋಗಿ ಇಲಾಖೆಯ ಸಚಿವರು ದಿನಾಂಕ 29.2.96 ರಂದು ಸಭೆಯಲ್ಲಿ ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿಗೊಳಿಸಬೇಕಾದ ರಸ್ತೆಗಳ ಪಟ್ಟಿಯನ್ನು ಹಾಗೂ ಅದರ ಅಂದಾಜು (20ಲಕ್ಷ ರೂ. ಗೊಳಪಟ್ಟ) ಪಟ್ಟಿಯನ್ನು ಸಲ್ಲಿಸುವಂತೆ ತಿಳಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಿಂದ ಯಾವುದೇ ಜಿಲ್ಲಾ